ಪಿ **.**ಡಬ್ಲು **-1**

ದಿ**: 05-12-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರಿದ ಪಾಟೀಸವಾಲು: ಶ್ರೀ ಎಸ್.ಎನ್ ವಕೀಲರಿಂದ:**

ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವಾವನ್ನು ಆಶೋಕ ಮತ್ತು ಒಟ್ಟು 7 ಜನರ ಮೇಲೆ ನಾವು ಸರ್ವೆ ಮಾಡಿಸಿದಾಗ ನಮ್ಮ ಜಮೀನಿನ ಮೇಲೆ ಇವರು ಒಂದು ಮನೆ ಮತ್ತು ಎರಡು ಬೇಸ್ ಮೆಂಟ್ ಕಟ್ಟಿದ್ದರು ಅದನ್ನು ಸರ್ವೆ ಮಾಡಿಸಲು ಇವರು ಬಿಟ್ಟಿರಲಿಲ್ಲ ಆದಕ್ಕಾಗಿ ಕೇಸ್ ಹಾಕಿದ್ದೇನೆ. ದಾವಾ ಆಸ್ತಿಯ ಸರ್ವೆ ನಂ.271/*/5 ಆಗಿದ್ದು ಇದರ ವಿಸ್ತೀರ್ಣ 01 ಎಕರೆ 11 ಗುಂಟೆ ಇದ್ದು ಇದರಲ್ಲಿ 06 ಗುಂಟೆ ಕರಾಬು ಜಮೀನು ಇರುತ್ತದೆ. ವಾದ ಪತ್ರದ ಪ್ಯಾರ ನಂ.3 ರ ಅಂಶವನ್ನು ನಾನು ಓದಿ ಸಹಿ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲ ನಿಮ್ಮ ತಾತನವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಹೌದು ನನ್ನ ತಾತನಿಗೆ ಸೇರಿದ್ದು ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ ಎನ್ನುತ್ತಾರೆ. 2001 ರಲ್ಲಿ ಪ್ರತಿವಾದಿ ನಂ.1 ರವರು ಪುರಸಭೆಯಿಂದ ಪರವಾನಗೆಯನ್ನು ಪಡೆದು ಕಟ್ಟಡ ಕಟ್ಟುವಾಗಿ ನೀವು ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನನ್ನ ಹೆಸರಿಗೆ ಆಸ್ತಿಯು ಬಂದ ಮೇಲೆ ನನಗೆ ತಿಳಿದ ಮೇಲೆ ನಾನು ತಕರಾರು ಮಾಡಿದ್ದೇನೆ ಎನ್ನುತ್ತಾರೆ. ತಕರಾರನ್ನು ಬಾಯಿ ಮಾತಿನ ಮೂಲಕ ಮಾಡಿದ್ದೇನೆ. 1987 ರಲ್ಲಿ 1ನೇ ಪ್ರತಿವಾದಿ ಮಾನ್ಯ ತಹಶಿಲ್ದಾರ ದೇವದುರ್ಗ ಸರ್ವೆ ನಂ.271 ರಲ್ಲಿ 20 ಗುಂಟೆ ಎನ್.ಎ ಮಾಡಿಸಿರುತ್ತಾರೆ ಅದಕ್ಕೆ ನೀವು ತಕರಾರು ಮಾಡಿಲ್ಲ ಎಂದರೆ ಹೌದು ಎನ್ನುತ್ತಾರೆ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣ ಒತ್ತುವರಿ ಮಾಡಿದ್ದಾರೆ ಎಂದು ನಿಮಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿಯು ನಾವು ಜಮೀನು ಸರ್ವೆ ಮಾಡಿಸುವಾದ ಸರ್ವೆ ಮಾಡಲು ಬಿಡಲಿಲ್ಲ ಅದಕ್ಕೆ ನಾವು ನ್ಯಾಯಾಲಯಕ್ಕೆ ಬಂದಿದ್ದೇವೆ ಎನ್ನುತ್ತಾರೆ. ಅಳತೆ ಮಾಡುವಾಗ ಪ್ರತಿವಾದಿಯರು ತಕರಾರು ಮಾಡಿದ್ದಾರೆ ಎಂದು ನೀವು ದಾಖಲೆಯನ್ನು ಹಾಜರು

ಮಾಡಿದ್ದೀರಾ ಎಂದರೆ ಸಾಕ್ಷಿಯು ಹಾಜರು ಮಾಡಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯರು ಸರ್ವೆ ಮಾಡಲು ಬಿಡುತ್ತಿಲ್ಲ ತಕರಾರು ಮಾಡುತ್ತಿದ್ದಾರೆ ಎಂದು ನಾನು ಪೋಲೀಸ್ ಠಾಣೆ ಗೆ ಹೋಗಿ ದೂರು ಕೊಟ್ಟಿರುವುದಿಲ್ಲ. ದಾವಾ ಆಸ್ತಿಯ ಚಕ್ ಬಂದಿ ಪೂರ್ವ ದಿಕ್ಕಿಗೆ ನಮ್ಮ ಜಾಗ ಇದೆ. ಪಶ್ಚಿಮ ದಿಕ್ಕಿಗೆ ಪ್ರತಿವಾದಿಯರ ಜಾಗ ಇದೆ ಉತ್ತರ ದಿಕ್ಕಿಗೆ ಬೇರೆಯವರ ಜಾಗ ಇದೆ ಅವರ ಹೆಸರು ಗೊತ್ತಿಲ್ಲ. ದಕ್ಷಿಣ ದಿಕ್ಕಿಗೆ ಗುಡ್ಡ ಇದೆ. ಪ್ರತಿವಾದಿಯರು ಸುಮಾರು 40 ವರ್ಷದ ಹಿಂದೆ 20 ಗುಂಟೆ ಆಸ್ತಿಯನ್ನು ಖರೀದಿ ಮಾಡಿ ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡು ಇದ್ದಾರೆ ಎಂದರೆ ಸಾಕ್ಷಿಯು ನನ್ನ ಹಿರಿಯ ಆಸ್ತಿ ನನ್ನ ಹೆಸರಿಗೆ ಬಂದ ಮೇಲೆ ನನ್ನ ಗಮನಕ್ಕೆ ಬಂದಿರುತ್ತದೆ. ಪ್ರತಿವಾದಿ ಸಂಬಂಧ ಪಟ್ಟ ಪ್ರಾಧಿಕಾರದಿಂದ ಎನ್.ಎ ಮಾಡಿಸಿ ಲೇಔಟ್ ಪ್ಲಾನ್ ಮಾಡಿಸಿದಾಗ ನೀವು ತಕರಾರು ಮಾಡಿದ್ದಿರಾ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯಕ್ಕೆ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ.

ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ